ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(5)ದ್ವಿ.ದ.ಸ ಬಡ್ತಿ-49/2020-21 ದಿನಾಂಕ : 06-02-2021

**ಅಧಿಸೂಚನೆ**

ವಿಷಯ :- ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ಘಟಕ ಕಛೇರಿಯ ವ್ಯಾಪ್ತಿಯಲ್ಲಿನ ಗ್ರೂಪ್-ಡಿ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ನೀಡಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ :- 1.ಈ ಕಛೇರಿಯ ಅದಿಸೂಚನೆ ಸಂಖ್ಯೆ : ಸಿ5(5) ಡಿ ಗ್ರೂಪ್ ಜೇ.ಪ 54/2019-20 ದಿನಾಂಕ: 12-03-2020.

2.ಈ ಕಛೇರಿಯ ಅದಿಸೂಚನೆ ಸಂಖ್ಯೆ : ಸಿ5(5)ದ್ವಿದಸ ಬಡ್ತಿ-49/2020-21 ದಿನಾಂಕ: 30-01-2020.

* * * * * *

ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಆಯುಕ್ತಾಲಯ ಘಟಕ ಕಛೇರಿಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಗ್ರೂಪ್ ಡಿ ನೌಕರರಿಗೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಗ್ರೂಪ್ "ಸಿ" ವೃಂದದ ವೇತನ ಶ್ರೇಣಿ ರೂ **21,400-42,000** ರಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಉಲ್ಲೇಖ-2ರ ಅಧಿಸೂಚನೆಯಂತೆ ಸ್ಥಾನಾಪನ್ನ ಮುಂಬಡ್ತಿ ನೀಡಿ ಆದೇಶಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ದಿನಾಂಕ: 06-02-2021 ರಂದು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಸ್ಥಳ ಆಯ್ಕೆ ಪ್ರಕ್ರಿಯೆಯನ್ನು ಕೌನ್ಸಿಲಿಂಗ್ ಮೂಲಕ ನಡೆಸಲಾಗಿರುತ್ತದೆ. ಅದರಂತೆ ನೌಕರರು ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ವ ಇಚ್ಛೆಯಿಂದ ಸ್ಥಳ ಆಯ್ಕೆ ಮಾಡಿಕೊಂಡಿರುವಂತೆ ಅವರ ಹೆಸರಿನ ಮುಂದೆ ನಮೂದಿಸಿರುವ ಬಡ್ತಿ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಜೇಷ್ಠತಾ ಸಂಖ್ಯೆ | ನೌಕರರ ಹೆಸರು ಮತ್ತು ವಿಳಾಸ ಶ್ರೀ / ಶ್ರೀಮತಿ | ಸ್ಥಳ ನಿಯುಕ್ತಿಗೊಳಿಸಿರುವ ಕಛೇರಿ ವಿಳಾಸ |
|---|---|---|---|
| 1 | 222 | ತೇಜೇಶ್ ಎಂ, ಗ್ರೂಪ್ ಡಿ ನೌಕರರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು (ಕೆ.ಎಸ್. ಪ್ರಸಾದ್ ರವರು ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಹೊಂದಿದರಿಂದ) |
| 2 | 256 | ಕೆ.ಯಶೋಧಮ್ಮ ಗ್ರೂಪ್ ಡಿ ನೌಕರರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಹೊಸಕೆರೆ ಹಳ್ಳಿ, ಬೆಂಗಳೂರು | ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಹೊಸಕೆರೆ ಹಳ್ಳಿ, ಬೆಂಗಳೂರು (ಪ್ರತಿಮ ನಾಡಗೌಡ ರವರು ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಹೊಂದಿದರಿಂದ) |
| 3 | 258 | ಆರ್ ವಿಲಿಯಂ, ಗ್ರೂಪ್ ಡಿ ನೌಕರರು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕೆ.ಜಿ.ರಸ್ತೆ, ಬೆಂಗಳೂರು (ಡಿ.ಎಸ್. ಸುರೇಶ್ ರವರು ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಹೊಂದಿದರಿಂದ) |
| 4 | 270 | ಗೋವಿಂದಸ್ವಾಮಿ, ಗ್ರೂಪ್ ಡಿ ನೌಕರರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಹೊಸಕೆರೆ ಹಳ್ಳಿ, ಬೆಂಗಳೂರು | ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಹೊಸಕೆರೆ ಹಳ್ಳಿ, ಬೆಂಗಳೂರು(ಎಂ.ಎಸ್. ಶಶಿಧರ್ ರವರು ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಹೊಂದಿದರಿಂದ) |
| 5 | 279 | ಬಿ.ಪಿ ಪೂರ್ಣಿಮ, ಗ್ರೂಪ್ ಡಿ ನೌಕರರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಹೊಸಕೆರೆ ಹಳ್ಳಿ, ಬೆಂಗಳೂರು | ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು. (ಕೆ.ರಾಮಮೂರ್ತಿ ರವರು ಪ್ರಥಮ ದರ್ಜೆ ಸಹಾಯಕರಾಗಿ ಬಡ್ತಿ ಹೊಂದಿದರಿಂದ) |

**ಷರತ್ತುಗಳು :**

1) ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ಕ.ನಾ.ಸೇ.ನಿಯಮ 42[ಬಿ] ಅನ್ವಯ ವೇತನ ನಿಗಧಿಗೆ ಅರ್ಹರಿರುತ್ತಾರೆ.
2) ಬಡ್ತಿ ಹೊಂದಿದ ನೌಕರರುಗಳು ಕನ್ನಡ ಭಾಷಾ ವಿನಾಯ್ತಿಯನ್ನು ಹೊಂದಿರತಕ್ಕದ್ದು. ಒಂದು ವೇಳೆ ವಿನಾಯ್ತಿ ಹೊಂದಿರದ ನೌಕರುಗಳು ಮುಂಬಡ್ತಿ ಹೊಂದಿದ ಎರಡು ವರ್ಷಗಳ ಅವಧಿಯೊಳಗೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಹೊಂದತಕ್ಕದ್ದು
3) ನೌಕರರು ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡಿರುವುದರಿಂದ ಸ್ಥಳ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.
4) ಬಡ್ತಿ ಹೊಂದಿದ ನೌಕರರುಗಳ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ ಆಗಿರತಕ್ಕದ್ದು.
5) ಈ ನೌಕರರ ಮೇಲೆ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ . ಅಲ್ಲದೆ ಸರ್ಕಾರಿ ನೌಕರನ ವಿರುದ್ಧ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ಪ್ರಾರಂಭವಾಗಿ ಅಂತಹ ಇಲಾಖಾ ವಿಚಾರಣೆ

ಅಥವಾ ಕ್ರಿಮಿನಲ್ ಮೊಕದ್ದಮೆ ದಂಡನೆಯಲ್ಲಿ ಪರ್ಯಾವಸಾನಗೊಂಡಿದ್ದಲ್ಲಿ ಆ ದಂಡನೆಯು ಜಾರಿಯಲ್ಲಿರುವ ಅವಧಿಯಲ್ಲಿ ಅಂತಹ ಸರ್ಕಾರಿ ನೌಕರರಿಗೆ ಮುಂಬಡ್ತಿ ಹೊಂದಲು ಆಸ್ಪದವಿಲ್ಲವೆಮದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ. ಗ್ರೂಪ್ ಡಿ ಹುದ್ದೆಯಿಂದ ಬಿಡುಗಡೆ ಮಾಡುವ ಮುನ್ನ ಇದನ್ನು ಖಚಿತಪಡಿಸಿಕೊಳ್ಳುವುದು.

6) ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 44 ಎಸ್‌ಎಸ್‌ಆರ್ 78 ದಿನಾಂಕ : 19/08/1978 ರನ್ವಯ ಬಡ್ತಿ ಹೊಂದಿರುವ ನೌಕರರು ನಿಗಧಿತ ಇಲಾಖಾ ಪರೀಕ್ಷೆಯಲ್ಲಿ ಬಡ್ತಿ ಹೊಂದಿದ ದಿನಾಂಕದಿಂದ 03 ವರ್ಷಗಳೊಳಗಾಗಿ ತೇರ್ಗಡೆ ಹೊಂದತಕ್ಕದ್ದು. ತಪ್ಪಿದ್ದಲ್ಲಿ ಬಡ್ತಿಯನ್ನು ರದ್ದುಗೊಳಿಸಲಾಗುವುದು.

7) ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ಬಡ್ತಿ ಹೊಂದಿದ ದ್ವಿತೀಯ ದರ್ಜೆ ಸಹಾಯಕರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಂಡ ನಂತರ ಅವರ ವಿದ್ಯಾರ್ಹತೆಯ ಬಗ್ಗೆ ಮೂಲ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಕಳುಹಿಸಿ ಅಂಕಪಟ್ಟಿ ನೈಜತೆ ದೃಢೀಕರಣವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

8) ಸಂಬಂಧಪಟ್ಟ ಕಛೇರಿಯ ಮುಖ್ಯಸ್ಥರು ಬಡ್ತಿ ಹೊಂದಿದ ದ್ವಿತೀಯ ದರ್ಜೆ ಸಹಾಯಕರುಗಳಿಗೆ ಜಿಲ್ಲಾ ತರಬೇತಿ ಸಂಸ್ಥೆಯ ವತಿಯಿಂದ ನಡೆಸುವ ಎರಡು ತಿಂಗಳ ವೃತ್ತಿ ಬುನಾದಿ ತರಬೇತಿಗೆ ತಪ್ಪದೇ ನಿಯೋಜಿಸತಕ್ಕದ್ದು.

9) ಈ ಆದೇಶ ಹೊರಡಿಸಿದ 7 ದಿನದೊಳಗೆ ಕರ್ತವ್ಯದಿಂದ ಬಿಡುಗಡೆ ಹೊಂದಿ/ಸೇರ್ಪಡೆಗೊಳ್ಳುವುದು.

10) ನೌಕರರು ಸ್ಥಳ ನಿಯುಕ್ತಿಯನ್ನು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಪಡೆದಿರುವುದರಿಂದ ಯಾವುದೇ ಪ್ರಯಾಣ ಭತ್ಯೆ, ವರ್ಗಾವಣೆ ಭತ್ಯೆ ಅಥವಾ ಸೇರಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.

11) ಬಡ್ತಿ ಪಡೆದ ನೌಕರರು ಕಡ್ಡಾಯವಾಗಿ ಗಣಕಯಂತ್ರದಲ್ಲಿ ಕಾರ್ಯನಿರ್ವಹಿಸುವ ಜ್ಞಾನವನ್ನು ಹೊಂದಿರತಕ್ಕದ್ದು ಹಾಗೂ ನಿಗಧಿತ ಅವಧಿತಯೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಉತ್ತೀರ್ಣತೆ ಹೊಂದತಕ್ಕದ್ದು.

ಮೇಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

[ಸಿರಿಯಣ್ಣವರ ಲಲಿತಾ ಚಂದ್ರಶೇಖರ್]
ನಿರ್ದೇಶಕರು [ಆಡಳಿತ][ಹೆ.ಪ್ರ]

ಇವರಿಗೆ:

1 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

2.ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, 100 ಅಡಿ ರಿಂಗ್ ರಸ್ತೆ, ಹೊಸಕೆರೆಹಳ್ಳಿ ಬೆಂಗಳೂರು.

3. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.

4 ಉಪನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು.

5.ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ರವರಿಗೆ ಈ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್- "www.schooleducation.kar.in" ನಲ್ಲಿ ಪ್ರಕಟಿಸಲು ತಿಳಿಸಿದೆ.

6. ಸಹಾಯಕ ನಿರ್ದೇಶಕರು, ಕೇಂದ್ರ ಸ್ಥಾನ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು.

7.ಈ ಕಛೇರಿಯ ಕಛೇರಿ ಸಿಬ್ಬಂದಿ ಸಿ5(1) ಹಾಗೂ ಸಿ5(9) ಕಾರ್ಯನಿರ್ವಾಕರಿಗೆ

8. ಸಂಬಂಧಿಸಿದ ನೌಕರರುಗಳಿಗೆ.

9. ಕಛೇರಿ ಪ್ರತಿ.